ದಿನಾಂಕಃ 23-01-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಜಿ ಅರ್ ವಕೀಲರಿಂದ**

ನಾನು ಸಲ್ಲಿಸಿರುವ ಪ್ರ.ಪತ್ರವನ್ನು ಜಮೀನಿನ ವಿಚಾರವಾಗಿ ಹಾಕಿರುತ್ತೇನೆ. ಸದರಿ ಪ್ರ.ಪತ್ರಕ್ಕೆ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ದಾವಾಸ್ತಿಯಲ್ಲಿ ನಾವು ಸಾಗು ಮಾಡುತ್ತಿದ್ದು ಸದರಿ ಆಸ್ತಿ ವಾದಿಗಳಿಗೆ ಬೇಕು ಎಂದು ಹೂಡಿರುತ್ತಾರೆ. ನನ್ನ ಗಂಡನಾದ ಪ್ರತಿವಾದಿ ಆರೋಗ್ಯವಾಗಿದ್ದಾರೆ ಎಂದರೆ ಸಾಕ್ಷಿ ಸದರಿಯವರು ಸಕ್ಕರೆ ಕಾಯಿಲೆಯಿಂದ ಬಳಲುತ್ತಿದ್ದು ಗ್ಯಾಂಗ್ರೀನ್ ನಿಂದ ಶಸ್ತ್ರಚಿಕಿತ್ಸೆಗೆ ಒಳಗಾಗಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ವೈದ್ಯಕೀಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜುಪಡಿಸಿರುತ್ತೇವೆ. ಸಾಕ್ಷಿಗೆ ಈಗ ತಮ್ಮ ಪರವಾಗಿ ನಿಶಾನೆಗೊಳಪಟ್ಟ ದಾಖಲೆಗಳ ಪಟ್ಟಿಯನ್ನು ತೋರಿಸಲಾಗಿ ಸದರಿ ಪಟ್ಟಿಯಲ್ಲಿ ನಾನು ಹೇಳಿದಂತಹ ಯಾವುದೇ ವೈದ್ಯಕೀಯ ದಾಖಲೆಗಳು ಇಲ್ಲದಿರುವುದನ್ನು ನೋಡಿ ಖಚಿತಪಡಿಸಿಕೊಂಡಿರುತ್ತಾರೆ. ಪ್ರತಿವಾದಿ ಆರೋಗ್ಯವಾಗಿದ್ದರು ಸಹ ಸದರಿಯವರು ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷ್ಯ ನುಡಿದರೆ ಸತ್ಯ ಹೊರಬರುವುದನ್ನು ತಪ್ಪಿಸುವ ಸಲುವಾಗಿ ನಾನು ಹಾಜರಾಗುತ್ತಿದ್ದೆನೆ ಎಂದರೆ ಸರಿಯಲ್ಲ.

ಈ ದಾವೆಗೆ ನಾವು ಸಲ್ಲಿಸಿರುವ ತಕರಾರಿನ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ವಾದಿಗಳ ತಾಯಿಯಾದ ಜಯಮ್ಮನವರ ಕಾಲದಿಂದಲೂ ಸಹ ವಾದಿಯರೇ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಸದರಿ ದಾವಾಸ್ತಿ ನಮಗೆ ಜಯಮ್ಮ ಮಾಡಿಕೊಟ್ಟ ನಿಡಿ-1 ರ ಮರಣಶಾಸನ ಪತ್ರದ ಮೂಲಕ ಬಂದಿರುತ್ತದೆ. ನಿಡಿ-1ರ ಆಧಾರದ ಮೇಲೆ ಖಾತೆಮಾಡಿಸಿಕೊಳ್ಳಲು ನಮಗೇನು ತೊಂದರೆಯಿರಲಿಲ್ಲ ಎಂದರೆ ಸಾಕ್ಷಿ ಪೋಡು ಆಗಿಲ್ಲದೆ ಇದ್ದಕಾರಣ ಖಾತೆ ಮಾಡಲು ಬರುವುದಿಲ್ಲ ಎಂದು ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ, ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

ದಾವಾಸ್ತಿಯಲ್ಲಿ ನಮಗೆ ನಿಡಿ-1ರಂತೆ ಯಾವುದೇ ವಿಲ್ ಆಗದೆ ಇದ್ದರು ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ.

( ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು)

-

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.